ಆ) ಅರಣ್ಯ ಜಮೀನನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಿಡುಗಡೆ ಮಾಡಬೇಕಾದರೆ ಕೇಂದ್ರ ಅರಣ್ಯ (ಸಂರಕ್ಷಣಾ) ಕಾಯ್ದೆ, 1980ರ ಪ್ರಕಾರ ಕೇಂದ್ರ ಸರ್ಕಾರದ ಅನುಮೋದನೆ ಬೇಕಾಗಿದ್ದು, ಈಗಾಗಲೇ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಮಾಡಲಾಗಿದೆ. ಕೇಂದ್ರ ಸರ್ಕಾರದ ಅನುಮೋದನೆ ಬರದೆ ಇರುವುದರಿಂದ ಅರಣ್ಯ ಜಮೀನು ಬಿಡುಗಡೆ ಮಾಡಲು ವಿಳಂಬವಾಗಿದೆ.

ಇ) ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹರಿಸಿ ಬೇಗನೆ ಅನುಮೋದನೆ ನೀಡಲು ಕೋರಲಾಗುತ್ತಿದೆ. ಅವರಿಂದ ಅನುಮೋದನೆ ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವದು.

ವಿಷಯ:- ಹೊಸದುರ್ಗ ತಾಲ್ಲೂಕಿನಲ್ಲಿ ಅನುದಾನ ಪಡೆದ ಹಿರಿಯ ಪ್ರಾಥಮಿಕ ಶಾಲೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 444 (642)

ಶ್ರೀ ಟಿ.ಜಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಅನುದಾನವನ್ನು ಪಡೆದ ಹಿರಿಯ ಪ್ರಾಥಮಿಕ ಶಾಲೆಗಳೆಷ್ಟು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಶಾಲೆಗಳು ಸೇರಿ)

ಆ) ಅನುದಾನ ಎಷ್ಟು ಶಾಲೆಗಳಿಗೆ ಬಿಡುಗಡೆ ಮಾಡಲಾಗಿದೆ?

ಇ) 1987-88ನೇ ಸಾಲಿನಲ್ಲಿ ಪ್ರಾರಂಭವಾದ ಶಾಲೆಗಳಿಗೆ ಅನುದಾನ ನೀಡಲು ಆಧ್ಯತೆಗಳೇನು?

ಉ) ಹೊಸದುರ್ಗ ತಾಲ್ಲೂಕಿನ ಜಾನಕಲ್ ಗ್ರಾಮದ ಪ್ರಿಯದರ್ಶಿನಿ ಹಿರಿಯ ಪ್ರಾಥಮಿಕ ಶಾಲೆಗೆ ಅನುದಾನ ನೀಡದಿರಲು ಕಾರಣವೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 17.

ಆ) 17.

ಇ) ಶಾಶ್ವತ ಅನುದಾನ ರಹಿತ ಶಾಲೆಗಳು ಎಂದು ಆದೇಶಿಸಿರುವುದರಿಂದ ಅನುದಾನ ನೀಡಲು ಬರುವುದಿಲ್ಲ.

ಈ) 1987-88ನೇ ಸಾಲಿನಿಂದ ಅಂದರೆ 1.6.87ರ ನಂತರದ ಶಾಲೆಗಳೆಲ್ಲಾ ಶಾಶ್ವತ ಅನುದಾನ ರಹಿತ ಶಾಲೆಗಳಾದ್ದರಿಂದ 88-89ರಲ್ಲಿ ಪ್ರಾರಂಭಿಸಿದ ಶಾಲೆಗಳನ್ನು ಸಹ ಅನುದಾನಕ್ಕೆ ಒಳಪಡಿಸಲು ಅವಕಾಶ ಇರುವುದಿಲ್ಲ.

ಉ) ಈ ಶಾಲೆಯು 87-88ರಲ್ಲಿ ಪ್ರಾರಂಭವಾಗಿರುವ ಶಾಲೆಯಾಗಿರುತ್ತದೆ. ಸದರಿ ಶಾಲೆಯು ಶಾಶ್ವತ ಅನುದಾನ ರಹಿತ ಶಾಲೆಗಳ ಪಟ್ಟಿಯಲ್ಲಿ ಸೇರಿರುತ್ತದೆ. ಆದ್ದರಿಂದ ಈ ಶಾಲೆಯನ್ನು ಅನುದಾನಕ್ಕೆ ಒಳಪಡಿಸಲು ಬರುವುದಿಲ್ಲ.

ವಿಷಯ:- ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಹುಳಿಯಾರ್ ಹೋಬಳಿಗಳಲ್ಲಿ ನೀರಾವರಿ ಯೋಜನೆಯನ್ನು ಡಿ.ಪಿ.ಎ.ಪಿ. ಯೋಜನೆಯಡಿಯಲ್ಲಿ ತೆಗೆದುಕೊಳ್ಳುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 445 (254)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯಾರ್ ಹೋಬಳಿ, ಮರೆನಡು ಮತ್ತು ಅಂಬಾಗಪ್ಪರ ಪತ ನೀರಾವರಿ ಯೋಜನೆಯನ್ನು ಡಿ.ಪಿ.ಎ.ಪಿ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವಂತೆ ಯಾವ ಸಾಲಿನಲ್ಲಿ ನಿರ್ದೇಶಿಸಿರುತ್ತಾರೆ.

2) ಅನೇಕ ಬಾರಿ ಸದನದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಣಕಾಸಿನ ತೊಂದರೆಯಿರುವುದಿಲ್ಲವೆಂದು ಆಶ್ವಾಸನೆಯನ್ನು ನೀಡಿರುವುದು ತಿಳಿದಿದೆಯೇ?

3) ಹಾಗಿದ್ದಲ್ಲಿ ಇಲ್ಲಿಯವರೆಗೆ ಯೋಜನೆಗಳು ಪೂರ್ಣಗೊಳಿಸದೆ ಇರಲು ಕಾರಣಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1) 1980-81ನೇ ಸಾಲಿನಲ್ಲಿ ಡಿ.ಪಿ.ಎ.ಪಿ. ಯೋಜನೆಯಲ್ಲಿ ಸದರಿ ಕಾಮಗಾರಿಗಳು ಸೇರ್ಪಡೆಯಾಗಿರುತ್ತದೆ.

2) ಕೇಂದ್ರ ಸರ್ಕಾರದ ಡಿ.ಪಿ.ಎ.ಪಿ ಮಾರ್ಗ ಸೂಚಿಯಂತೆ ಪತ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲವೆಂದು ವಿಧಾನ ಸಭೆಯಲ್ಲಿ ತಿಳಿಸಲಾಗಿತ್ತು.

3) 1992-93ನೇ ಸಾಲಿನಲ್ಲಿ ಪಿಡಬ್ಲ್ಯೂಡಿ ಇಲಾಖೆಯು ಸಣ್ಣ ನೀರಾವರಿ ಇಲಾಖೆಯಿಂದ ಪ್ರಾಣಿ ಜಿಲ್ಲಾ ಪಂಚಾಯಿತಿಗೆ ವರ್ಗಾವಣೆಯಾದ ಪ್ರಯುಕ್ತ ಈ ಕಾಮಗಾರಿಗಳಿಗೆ 21.040 ಲಕ್ಷ ರೂ.ಗಳು ಬೇಕಾಗಿದ್ದು ಈವರೆವಿಗೂ ರೂ. 10.690 ಲಕ್ಷಗಳು ಖರ್ಚು ಮಾಡಲಾಗಿರುತ್ತದೆ. ಉಳಿಕೆ ಹಣ ರೂ. 10.350 ಲಕ್ಷಗಳಿಗೆ ಅನುದಾನ ಬಾಕಿ ಬರಬೇಕಾಗಿರುತ್ತದೆ. ಆದುದರಿಂದ ಕಾಮಗಾರಿಗಳು ಅನುದಾನ ಜಿಲ್ಲಾ ಪಂಚಾಯ್ತಿನಿಂದ ಬಿಡುಗಡೆಯಾಗಿಲ್ಲ. ಕೊರತೆ ಇದ್ದ ಪ್ರಯುಕ್ತ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿಲ್ಲ. ಆದುದರಿಂದ 1996-97ನೇ ಸಾಲಿನಲ್ಲಿ ಡಿಪಿಯಪಿ: